ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

**ಸರ್ವ ಶಿಕ್ಷಣ ಅಭಿಯಾನ–ಕರ್ನಾಟಕ, ರಾಜ್ಯ ಯೋಜನಾ ಕಛೇರಿ,ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ**

**ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು–01**

ಸಂಖ್ಯೆ: ಸಶಿಅ/ಆ.ಚ/ಸ್ವ.ವಿ.ಪು/1/2016–17 ದಿನಾಂಕ: 06.07.2016

**ಸುತ್ತೋಲೆ**

ವಿಷಯ:"ಸ್ವಚ್ಛ ವಿದ್ಯಾಲಯ ಪುರಸ್ಕಾರ" – 2016 ಕಾರ್ಯಕ್ರಮದಲ್ಲಿ ಸರ್ಕಾರಿ ಶಾಲೆಗಳು ಭಾಗವಹಿಸುವ – ಕುರಿತು.

ಉಲ್ಲೇಖ: ದಿನಾಂಕ 22.06.2016ರ ಎಂ.ಹೆಚ್.ಆರ್.ಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ವಿಭಾಗದ, ಮಾರ್ಗಸೂಚಿ ಸಂಖ್ಯೆ:F.No.27-98/2015-EE-16.

ಸ್ವಚ್ಛ ವಿದ್ಯಾಲಯ ಆಂದೋಲನವನ್ನು 2015–16ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಆಯೋಜಿಸಲಾಗಿತ್ತು. ಇದರ ಪರಿಣಾಮವಾಗಿ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಪ್ರತ್ಯೇಕ ಹೆಣ್ಣು ಮಕ್ಕಳ ಹಾಗೂ ಗಂಡು ಮಕ್ಕಳ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ನೈರ್ಮಲ್ಯ, ಶುದ್ಧ ನೀರು ಮತ್ತು ನೈರ್ಮಲ್ಯದ ಅಭ್ಯಾಸಗಳನ್ನು ಗುರುತಿಸಿ, ಪ್ರೋತ್ಸಾಹಿಸಿ, ಶ್ರೇಷ್ಠತೆಯನ್ನು ಆಚರಿಸುವುದರ ಮೂಲಕ ಶಾಲೆಗಳಲ್ಲಿ ಈ ಉತ್ತಮ ಆಚರಣೆಗಳನ್ನು ನಿರಂತರವಾಗಿ ಪಾಲಿಸುವಂತೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ರಾಷ್ಟ್ರಮಟ್ಟದಲ್ಲಿ **"ಸ್ವಚ್ಛ ವಿದ್ಯಾಲಯ ಪುರಸ್ಕಾರ"** ನೀಡಲು ಮುಂದಾಗಿದೆ. ಈ ಪುರಸ್ಕಾರದ ಉದ್ದೇಶವು ಸ್ವಚ್ಛ ವಿದ್ಯಾಲಯ ಆಂದೋಲನದ ಆಶಯವನ್ನು ಈಡೇರಿಸುವಲ್ಲಿ ಮಹತ್ವದ ಹೆಜ್ಜೆಗಳನ್ನು ಇಟ್ಟ ಶಾಲೆಗಳನ್ನು ಗೌರವಿಸುವುದಾಗಿದೆ. ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪುರಸ್ಕಾರಗಳನ್ನು ನೀಡಲು ಚೌಕಟ್ಟನ್ನು ರೂಪಿಸಲಾಗಿದ್ದು, ಇದರಡಿಯಲ್ಲಿ, ಶಾಲಾ ಮುಖ್ಯಶಿಕ್ಷಕರು ತಮ್ಮ ಶಾಲೆಗಳನ್ನು **ಸ್ವಯಂ–ನಾಮನಿರ್ದೇಶನ** ಮಾಡಬೇಕಾಗಿರುತ್ತದೆ. ಇದಕ್ಕಾಗಿ, ಒಂದು ಸರಳ ಪ್ರಶ್ನಾವಳಿಯನ್ನು ಎಂ.ಹೆಚ್.ಆರ್.ಡಿಯ ಜಾಲತಾಣದಲ್ಲಿ (website) ಅಥವಾ ಡೌನ್‌ಲೋಡ್ ಮಾಡಬಹುದಾದ ಸ್ವಚ್ಛ ವಿದ್ಯಾಲಯ ಪುರಸ್ಕಾರ್ ಮೊಬೈಲ್ ಆಪ್ ಬಳಸಿ ಉತ್ತರಿಸಬೇಕಾಗಿರುತ್ತದೆ. ಮೊಬೈಲ್ ಆಪ್ ಅನ್ನು ಡೌನ್‌ಲೋಡ್ ಮಾಡುವ ಮತ್ತು ಮೊಬೈಲ್ ಆಪ್ ಹಾಗೂ ವೆಬ್–ಪೋರ್ಟಲ್ ಬಳಸುವ ವಿಧಾನವನ್ನು ಈ ಮುಂದೆ ವಿವರಿಸಲಾಗಿದೆ.

2. "ಸ್ವಚ್ಛ ವಿದ್ಯಾಲಯ ಪುರಸ್ಕಾರಕ್ಕೆ" ಸ್ವಚ್ಛ ವಿದ್ಯಾಲಯಗಳನ್ನು ಆಯ್ಕೆ ಮಾಡುವ **ಪ್ರಕ್ರಿಯೆಯ ವೇಳಾಪಟ್ಟಿ ಈ ಕೆಳಕಂಡಂತಿದೆ:**

| ಕ್ರ.ಸಂ | ವಿವರಣೆ | ವೇಳಾ ಪಟ್ಟಿ |
|---|---|---|
| 1 | ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 01–31ನೇ ಜುಲೈ 2016 |
| 2 | ಜಿಲ್ಲಾ ಮಟ್ಟದ ಪುರಸ್ಕಾರಕ್ಕೆ ಶಾಲೆಗಳ ಆಯ್ಕೆ ಹಾಗೂ ಫಲಿತಾಂಶಗಳನ್ನು ರಾಜ್ಯ ಮಟ್ಟಕ್ಕೆ ಸಲ್ಲಿಸುವುದು | 01–31ನೇ ಆಗಸ್ಟ್ 2016 |
| 3 | ರಾಜ್ಯ ಮಟ್ಟದ ಪುರಸ್ಕಾರಕ್ಕೆ ಶಾಲೆಗಳ ಆಯ್ಕೆ | 01–30ನೇ ಸೆಪ್ಟೆಂಬರ್ 2016 |
| 4 | ರಾಷ್ಟ್ರ ಮಟ್ಟದ ಆಯ್ಕೆಗಾಗಿ ರಾಜ್ಯ ಮಟ್ಟದ ಫಲಿತಾಂಶಗಳನ್ನು ಎಂ.ಹೆಚ್.ಆರ್.ಡಿಗೆ ಸಲ್ಲಿಸುವುದು. | 07ನೇ ತಾರೀಖು ಅಕ್ಟೋಬರ್ 2016ರ ಒಳಗೆ |
| 5 | ರಾಷ್ಟ್ರಮಟ್ಟದ ಪುರಸ್ಕಾರಗಳಿಗೆ ಶಾಲೆಗಳ ಆಯ್ಕೆ | 25ನೇ ತಾರೀಖು ನವೆಂಬರ್ 2016 ರ ಒಳಗೆ |

3. **ಭಾಗವಹಿಸಲು ಅರ್ಹತೆ:** ಗ್ರಾಮೀಣ ಹಾಗೂ ನಗರ ಪ್ರದೇಶಗಳ ಎಲ್ಲಾ ಸರ್ಕಾರಿ ಶಾಲೆಗಳು ಭಾಗವಹಿಸಬಹುದಾಗಿದೆ.

4. **ಸ್ವಚ್ಛ ವಿದ್ಯಾಲಯ ಪುರಸ್ಕಾರಕ್ಕೆ ಅರ್ಜಿಗಳನ್ನು ಭರ್ತಿ ಮಾಡುವ ವಿಧಾನ**

i. ಶಾಲೆಗಳು, ಎಂ.ಹೆಚ್.ಆರ್.ಡಿಯ ವೆಬ್‌ಸೈಟ್‌ನಲ್ಲಿರುವ (http://mhrd.gov.in → Swachh Vidyalaya → Swachh Vidyalaya Puraskar) ಸ್ವಚ್ಛ ವಿದ್ಯಾಲಯ ಪುರಸ್ಕಾರ್ ಶೀರ್ಷಿಕೆಯಡಿಯಲ್ಲಿ ಅಥವಾ ಸ್ವಚ್ಛ ವಿದ್ಯಾಲಯ ಪುರಸ್ಕಾರ್ ಮೊಬೈಲ್ ಆ್ಯಪ್‌ನ್ನು ಡೌನ್‌ಲೋಡ್ ಮಾಡಿಕೊಂಡು ಲಭ್ಯವಿರುವ ನಿಗದಿತ ನಮೂನೆಯಲ್ಲಿ (ಅನುಬಂಧ-1) ನೋಂದಣಿ ಮಾಡಿಕೊಂಡು ಮಾಹಿತಿಯನ್ನು ಸಲ್ಲಿಸಬೇಕು. ಮೊಬೈಲ್ ಆಪ್‌ಅನ್ನು ಗೂಗಲ್ ಪ್ಲೇ ಸ್ಟೋರ್ ನಿಂದ ಅಥವಾ ಮೊಬೈಲ್ ಸಂಖ್ಯೆ 07097298400 ಗೆ ಮಿಸ್ಡ್‌ಕಾಲ್ ನೀಡುವ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಶಾಲೆಗಳ U-DISE ಸಂಕೇತವನ್ನು ಬಳಸಿ ನೋಂದಣಿ ಮಾಡಿಕೊಳ್ಳಬೇಕು.

ii. ವೆಬ್‌ಸೈಟ್ ಅಥವಾ ಮೊಬೈಲ್ ಆ್ಯಪ್ ವಿವಿಧ ವರ್ಗಗಳ ಶಾಲೆಗಳ ಅಗತ್ಯಗಳಿಗೆ ಅನುಗುಣವಾಗಿ ರೂಪಿಸಲಾಗಿದೆ.

iii. ಶಾಲೆಗಳು ನಿಗದಿತ ನಮೂನೆಯಲ್ಲಿ ನಿಖರವಾದ ಮಾಹಿತಿಯನ್ನು ಒದಗಿಸಬೇಕು.

iv. ಆನ್‌ಲೈನ್‌ನಲ್ಲಿ ಇರುವ ನಿಗದಿತ ನಮೂನೆಯು ಮೂರು ಅನುಬಂಧಗಳನ್ನು ಹೊಂದಿದ್ದು, **ಅನುಬಂಧ-1** ರಲ್ಲಿ ಒದಗಿಸಬೇಕಾಗಿರುವ ಮಾಹಿತಿಯು ಸ್ವಚ್ಛ ವಿದ್ಯಾಲಯ ಮಾರ್ಗಸೂಚಿಯನ್ನು ಆಧರಿಸಿದೆ. **ಅನುಬಂಧ-2** ರಲ್ಲಿ ಐದು ವರ್ಗಗಳಾದ (ಎ) ನೀರು (ಬಿ) ಶೌಚಾಲಯಗಳು (ಸಿ) ಕೈ ತೊಳೆಯುವುದು (ಡಿ) ಕಾರ್ಯಾಚರಣೆ ಮತ್ತು ನಿರ್ವಹಣೆ (ಇ) ವರ್ತನೆಯಲ್ಲಿ ಬದಲಾವಣೆ ಮತ್ತು ಸಾಮರ್ಥ್ಯ ಅಭಿವೃದ್ಧಿಗೆ ಸಂಬಂಧಿಸಿದ ಸೂಚಕಗಳನ್ನು ನೀಡಲಾಗಿದೆ. **ಅನುಬಂಧ-3** ರಲ್ಲಿ ಅಂಕಗಳನ್ನು ನೀಡುವ ವಿಧಾನವನ್ನು ತಿಳಿಯಪಡಿಸಿದೆ.

v. ಕೋಷ್ಟಕ-1ರಲ್ಲಿ ಪ್ರತಿ ಉಪವಿಭಾಗಕ್ಕೆ ನೀಡುವ ಗರಿಷ್ಠ ಅಂಕಗಳನ್ನು ತಿಳಿಯಪಡಿಸಿದೆ:

**ಕೋಷ್ಟಕ-1**

| ಕ್ರ.ಸಂ | ಉಪವಿಭಾಗಗಳು | ಗರಿಷ್ಠ ಅಂಕ |
|---|---|---|
| 1 | ನೀರು | 22 |
| 2 | ಶೌಚಾಲಯ | 28 |
| 3 | ಸಾಬೂನು ಬಳಸಿ ಕೈ ತೊಳೆಯುವ ವ್ಯವಸ್ಥೆ | 20 |
| 4 | ಕಾರ್ಯಾಚರಣೆಗಳು ಮತ್ತು ನಿರ್ವಹಣೆ | 15 |
| 5 | ವರ್ತನೆಯಲ್ಲಿ ಬದಲಾವಣೆ ಮತ್ತು ಸಾಮರ್ಥ್ಯ ಅಭಿವೃದ್ಧಿ | 15 |
| | **ಒಟ್ಟು** | **100** |

vi. ವರ್ಗವಾರು ಶಾಲೆಗಳ ಸಾಧನೆಯನ್ನು ನಿಗದಿತ ನಮೂನೆಯ ಅನುಬಂಧ-3 ರಲ್ಲಿ ತಿಳಿಸಿರುವ ವಿಧಾನವನ್ನು ಆಧರಿಸಿ ಮೌಲ್ಯಾಂಕನ ಮಾಡಲಾಗುತ್ತದೆ.

vii. ಮೌಲ್ಯಾಂಕನವನ್ನು ಆಧರಿಸಿ ಪ್ರತಿ ವರ್ಗದಲ್ಲಿ, ಕೋಷ್ಟಕ-2ರಲ್ಲಿ ತಿಳಿಯಪಡಿಸಿರುವಂತೆ ಶಾಲೆಗಳನ್ನು ಶ್ರೇಣೀಕರಿಸಲಾಗುವುದು.

**ಕೋಷ್ಟಕ-2 ಶಾಲೆಗಳ ಶ್ರೇಣಿಯನ್ನು ನಿಗದಿಪಡಿಸುವಿಕೆ**

| ಕ್ರ.ಸಂ | ಅಂಕಗಳು | ಶ್ರೇಣಿ | ಷರಾ |
|---|---|---|---|
| 1 | 90% – 100% ಮಾನದಂಡಗಳ ಪಾಲನೆ | ಹಸಿರು/***** | ಅತ್ಯುತ್ತಮ ಹೀಗೇ ಮುಂದುವರೆಸಿ |
| 2 | 75% – 89% ಮಾನದಂಡಗಳ ಪಾಲನೆ | ನೀಲಿ/**** | ಉತ್ತಮ |
| 3 | 51% – 74% ಮಾನದಂಡಗಳ ಪಾಲನೆ | ಹಳದಿ/*** | ಉತ್ತಮ, ಆದರೆ ಸುಧಾರಣೆಯನ್ನು ಮಾಡಿಕೊಳ್ಳುವ ಅವಕಾಶವಿದೆ |
| 4 | 35% – 50% ಮಾನದಂಡಗಳ ಪಾಲನೆ | ಕಿತ್ತಳೆ/** | ಒಳ್ಳೆಯದು, ಸುಧಾರಣೆಯ ಅವಶ್ಯಕತೆ ಇದೆ |
| 5 | ಶೇ.35% ಕ್ಕಿಂತ ಮಾನದಂಡಗಳ ಪಾಲನೆ | ಕೆಂಪು/* | ಕಳಪೆ: ಸುಧಾರಣೆಯು ಅತ್ಯವಶ್ಯಕ |

*ಪ್ರಶಸ್ತಿ ಪಡೆಯುವ ಅರ್ಹತೆಯನ್ನು ಗಳಿಸಲು ಪ್ರತಿ ಶಾಲೆಯು, ಪ್ರತಿ ಉಪವಿಭಾಗಗಳಲ್ಲಿ ಕನಿಷ್ಠ ಕಿತ್ತಳೆ ಬಣ್ಣದ ಶ್ರೇಣಿಯನ್ನು (35%–50%) ಪಡೆಯಬೇಕಾಗಿರುತ್ತದೆ.

5. **ಪ್ರಶಸ್ತಿಗಳ ವರ್ಗಗಳು:** ಪ್ರಶಸ್ತಿಗಳನ್ನು ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟ ಎಂದು ವರ್ಗೀಕರಿಸಲಾಗಿದೆ.

i. **ಜಿಲ್ಲಾ ಮಟ್ಟದ ಪ್ರಶಸ್ತಿಗಳು: ಹಸಿರು, ನೀಲಿ ಮತ್ತು ಹಳದಿ ಬಣ್ಣದ ಶ್ರೇಣಿಯನ್ನು ಪಡೆದಿರುವ ಶಾಲೆಗಳು**

- ನಿಗದಿಪಡಿಸಿದ ದಿನಾಂಕದೊಳಗೆ Online(web/mobile) ಮೂಲಕ ಸ್ವೀಕೃತವಾದ ಅರ್ಜಿಗಳನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ (ಅಥವಾ ನಾಮನಿರ್ದೇಶಿಸಲ್ಪಟ್ಟ ವ್ಯಕ್ತಿ), ಉಪನಿರ್ದೇಶಕರು(ಆಡಳಿತ), ಮೂವರು ಉತ್ಕೃಷ್ಟ ಶಾಲಾ ಶಿಕ್ಷಕರು, ಕಾರ್ಯಪಾಲಕ ಅಭಿಯಂತರರು, (ನೀರು ಸರಬರಾಜು/ ಪ್ರಾಥಮಿಕ ಆರೋಗ್ಯ ಅಭಿವೃದ್ಧಿ), ಜಿಲ್ಲಾ ಆರೋಗ್ಯಾಧಿಕಾರಿ ಮತ್ತು ನಾಗರಿಕ ಸಮಾಜ ಸಂಸ್ಥೆಗಳ/ಸರ್ಕಾರೇತರ ಸಂಸ್ಥೆಗಳ ಇಬ್ಬರು ಸದಸ್ಯರನ್ನು ಒಳಗೊಂಡ ಸಮಿತಿಯಿಂದ ಪರಿಶೀಲಿಸಲಾಗುವುದು.

- **ಗ್ರಾಮೀಣ :**

  (ಅ) ಹಳದಿ ಶ್ರೇಣಿಗಿಂತ ಕಡಿಮೆಯಿಲ್ಲದ ಅತಿ ಹೆಚ್ಚು ಅಂಕಗಳನ್ನು ಪಡೆದ ಮೂರು ಪ್ರಾಥಮಿಕ ಮತ್ತು ಮೂರು ಪ್ರೌಢಶಾಲೆಗಳನ್ನು ಜಿಲ್ಲಾ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು (ಒಟ್ಟು 6 ಶಾಲೆಗಳು).

  (ಆ) ಇದರೊಂದಿಗೆ, ಪ್ರತಿ ಉಪವಿಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದಿರುವ ಹಾಗೂ ಉಪವಿಭಾಗದಲ್ಲಿ ಹಸಿರು ಶ್ರೇಣಿಗಿಂತ ಕಡಿಮೆಯಿಲ್ಲದ ಮೂರು ಪ್ರಾಥಮಿಕ ಮತ್ತು ಮೂರು ಪ್ರೌಢಶಾಲೆಗಳನ್ನು ಉಪವಿಭಾಗವಾರು ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು (ಒಟ್ಟು 30 ಶಾಲೆಗಳು).

- ನಗರ :

  (ಅ) ಹಳದಿ ಶ್ರೇಣಿಗಿಂತ ಕಡಿಮೆಯಿಲ್ಲದ ಅತಿ ಹೆಚ್ಚು ಅಂಕಗಳನ್ನು ಪಡೆದಿರುವ ಒಂದು ಪ್ರಾಥಮಿಕ ಮತ್ತು ಒಂದು ಪ್ರೌಢಶಾಲೆಗಳನ್ನು ಜಿಲ್ಲಾ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು ( ಒಟ್ಟು 2 ಶಾಲೆಗಳು).

  (ಆ) ಇದರೊಂದಿಗೆ, ಪ್ರತಿ ಉಪವಿಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದಿರುವ ಹಾಗೂ ಉಪವಿಭಾಗದಲ್ಲಿ ಹಸಿರು ಶ್ರೇಣಿಗಿಂತ ಕಡಿಮೆಯಿಲ್ಲದ ಒಂದು ಪ್ರಾಥಮಿಕ ಹಾಗೂ ಒಂದು ಪ್ರೌಢಶಾಲೆಗಳನ್ನು ಉಪವಿಭಾಗವಾರು ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು (ಒಟ್ಟು 10 ಶಾಲೆಗಳು).

- ಪ್ರಶಸ್ತಿಗಾಗಿ ನಾಮನಿರ್ದೇಶಿತ ಶಾಲೆಗಳ ಪರಿಶೀಲನೆಯನ್ನು, ಜಿಲ್ಲಾ ಮಟ್ಟದ ಸಮಿತಿಯು, ಜಿಲ್ಲೆಯ ಶಾಲೆಗಳ ಶಿಕ್ಷಕರ ಹಾಗೂ ಮಕ್ಕಳ ತಂಡದಿಂದ ಮಾಡಿಸಬಹುದು. ಈ ಕುರಿತು ಪರಿಶೀಲನೆಯನ್ನು ಚೆಕ್‌ಲಿಸ್ಟ್ ಹಾಗೂ ಭಾವಚಿತ್ರಗಳನ್ನು ಆಧರಿಸಿ ಮಾಡಲಾಗುವುದು.

- ಒಂದು ವೇಳೆ ಒಟ್ಟು ಶ್ರೇಣಿಯು ಹಸಿರು ಬಣ್ಣ ಪಡೆದಿರುವ ಎಲ್ಲಾ ಶಾಲೆಗಳನ್ನು ಗುರುತಿಸಿ ಪ್ರಶಸ್ತಿಪತ್ರವನ್ನು ನೀಡುವುದಾದರೆ, ಎಲ್ಲಾ ಉಪವಿಭಾಗಗಳನ್ನು ಪರಿಗಣಿಸಿ ಅತಿ ಹೆಚ್ಚು ಅಂಕ ಹಾಗೂ ಹಸಿರು ಬಣ್ಣದ ಶ್ರೇಣಿ ಪಡೆದಿರುವ ಶಾಲೆಗಳಿಗೆ (ಒಟ್ಟು 08) ಮತ್ತು ಪ್ರತಿ ಉಪವಿಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಹಾಗೂ ಹಸಿರು ಬಣ್ಣದ ಶ್ರೇಣಿ ಪಡೆದಿರುವ (ಒಟ್ಟು 40) ಶಾಲೆಗಳಿಗೆ ಜಿಲ್ಲಾ ಮಟ್ಟದಲ್ಲಿ ಗುರುತಿಸಿ ಪ್ರಶಸ್ತಿಪತ್ರಗಳನ್ನು ನೀಡಲಾಗುವುದು.

**ii. ರಾಜ್ಯ ಮಟ್ಟದ ಪ್ರಶಸ್ತಿಗಳು : ಹಸಿರು ಮತ್ತು ನೀಲಿ ಬಣ್ಣದ ಶ್ರೇಣಿ ಪಡೆದಿರುವ ಶಾಲೆಗಳು**

- ಜಿಲ್ಲಾ ಹಂತದ ಪ್ರಶಸ್ತಿಗೆ ಒಟ್ಟಾರೆ ಆಯ್ಕೆಯಾಗಿ ನೀಲಿ ಬಣ್ಣದ ಶ್ರೇಣಿಗಿಂತ ಕಡಿಮೆಯಿಲ್ಲದ ಶಾಲೆಗಳನ್ನು ರಾಜ್ಯ ಮಟ್ಟದ ಪ್ರಶಸ್ತಿಗೆ ಪರಿಗಣಿಸಲಾಗುವುದು. ಒಂದು ವೇಳೆ ಒಟ್ಟಾರೆಯಾಗಿ ಹಸಿರು ಬಣ್ಣದ ಶ್ರೇಣಿ ಪಡೆದ ಶಾಲೆಗಳ ಸಂಖ್ಯೆ ಹೆಚ್ಚಾಗಿದ್ದಲ್ಲಿ ಅಂತಹ ಎಲ್ಲಾ ಶಾಲೆಗಳನ್ನು ರಾಜ್ಯ ಮಟ್ಟದ ಪ್ರಶಸ್ತಿಗೆ ಪರಿಗಣಿಸಲಾಗುವುದು.

- ಈ ಮೇಲಿನ ಶಾಲೆಗಳನ್ನು ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಅಥವಾ ಅವರಿಂದ ನಾಮನಿರ್ದೇಶಿತ ವ್ಯಕ್ತಿಯ ನೇತೃತ್ವದಲ್ಲಿ ನಿರ್ದೇಶಕರು(ಶಿಕ್ಷಣ), ನಿರ್ದೇಶಕರು(ಆರೋಗ್ಯ), ಇಬ್ಬರು ಉತ್ಕೃಷ್ಟ ಶಾಲಾ ಮುಖ್ಯಶಿಕ್ಷಕರು (ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಿಂದ ಆಯ್ಕೆಗೊಂಡ), ಮುಖ್ಯ ಕಾರ್ಯಪಾಲಕ ಅಭಿಯಂತರರು (ನೀರು ಸರಬರಾಜು/ಪ್ರಾಥಮಿಕ ಆರೋಗ್ಯ ಅಭಿವೃದ್ಧಿ), ನಿರ್ದೇಶಕರು (ಪಂಚಾಯತ್ ರಾಜ್), ನಿರ್ದೇಶಕರು(ನಗರ ಸ್ಥಳೀಯ ಸಂಸ್ಥೆಗಳು), ನಾಗರಿಕ ಸಮಾಜ ಸಂಸ್ಥೆಯ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯು ರಾಜ್ಯ ಮಟ್ಟದ ಪ್ರಶಸ್ತಿಗಾಗಿ ಪರಿಶೀಲಿಸುವುದು.

- ರಾಜ್ಯ ಮಟ್ಟದ ಪ್ರಶಸ್ತಿಗೆ ಗರಿಷ್ಠ ಅಂಕ ಮತ್ತು ನೀಲಿ ಬಣ್ಣದ ಶ್ರೇಣಿಗಿಂತ ಕಡಿಮೆಯಿಲ್ಲದ 20 ಪ್ರಾಥಮಿಕ ಹಾಗೂ 20 ಪ್ರೌಢಶಾಲೆಗಳನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಳಿಂದ (ನಗರ ಪ್ರದೇಶದ 05 ಶಾಲೆಗಳು ಮತ್ತು ಗ್ರಾಮೀಣ ಪ್ರದೇಶದ 15 ಶಾಲೆಗಳು) ಆಯ್ಕೆ ಮಾಡಲಾಗುವುದು.

- ಪ್ರಶಸ್ತಿಗಾಗಿ ನಾಮನಿರ್ದೇಶಿತ ಶಾಲೆಗಳ ಪರಿಶೀಲನೆಯನ್ನು, ರಾಜ್ಯ ಮಟ್ಟದ ಸಮಿತಿಯು, ಜಿಲ್ಲೆಯ ಶಾಲೆಗಳ ಶಿಕ್ಷಕರ ಹಾಗೂ ಮಕ್ಕಳ ತಂಡದಿಂದ ಮಾಡಿಸಬಹುದು. ಈ ಕುರಿತು ಪರಿಶೀಲನೆಯನ್ನು ಚೆಕ್‌ಲಿಸ್ಟ್ ಹಾಗೂ ಭಾವಚಿತ್ರಗಳನ್ನು ಆಧರಿಸಿ ಮಾಡಲಾಗುವುದು.

- ರಾಜ್ಯ ಮಟ್ಟದಲ್ಲಿ ಆಯ್ಕೆಯಾದ ಪ್ರತಿ 40 ಶಾಲೆಗಳನ್ನು ಗುರುತಿಸಿ ಪ್ರಶಸ್ತಿಪತ್ರವನ್ನು ನೀಡಲಾಗುವುದು.

- ಈ ಶಾಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲು ರಾಜ್ಯದ ವತಿಯಿಂದ ಸಹ ಹೆಚ್ಚುವರಿ ಅನುದಾನವನ್ನು ನೀಡಬಹುದಾಗಿದೆ.

- ಗರಿಷ್ಠ 20 ಪ್ರಾಥಮಿಕ ಹಾಗೂ 20 ಪ್ರೌಢಶಾಲೆಗಳನ್ನು ರಾಷ್ಟ್ರಮಟ್ಟದ ಪ್ರಶಸ್ತಿಗೆ ಪರಿಗಣಿಸಲಾಗುವುದು.

iii) **ರಾಷ್ಟ್ರ ಮಟ್ಟದ ಪ್ರಶಸ್ತಿಗಳು : ಕೇವಲ ಹಸಿರು ಬಣ್ಣದ ಶ್ರೇಣಿ ಪಡೆದಿರುವ ಶಾಲೆಗಳಿಗೆ**

- ರಾಷ್ಟ್ರ ಮಟ್ಟದ ಪ್ರಶಸ್ತಿಗೆ 100 ಪ್ರಾಥಮಿಕ ಹಾಗೂ 100 ಪ್ರೌಢಶಾಲೆಗಳನ್ನು (30 ನಗರ ಮತ್ತು 70 ಗ್ರಾಮೀಣ) ಆಯ್ಕೆ ಮಾಡಲಾಗುವುದು.

- ಪ್ರತಿ ರಾಜ್ಯದಿಂದ ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆಯಾದ 40 ಶಾಲೆಗಳನ್ನು ರಾಷ್ಟ್ರ ಮಟ್ಟದ ಪ್ರಶಸ್ತಿಗೆ ಪರಿಗಣಿಸಲಾಗುವುದು.

- ನಾಮನಿರ್ದೇಶಿತ ಶಾಲೆಗಳ ಶೇ.100% ರಷ್ಟು ಪರಿಶೀಲನೆಯನ್ನು ಚೆಕ್‌ಲಿಸ್ಟ್ ಹಾಗೂ ಭಾವಚಿತ್ರಗಳನ್ನು ಬಳಸಿ ಮಾಡಲಾಗುವುದು.

- ರಾಷ್ಟ್ರ ಮಟ್ಟದಲ್ಲಿ ಶಿಕ್ಷಣ ಮಂತ್ರಾಲಯದ ಕಾರ್ಯದರ್ಶಿಗಳು(ಶಾಲಾ ಶಿಕ್ಷಣ ಮತ್ತು ಸಾಕ್ಷರತೆ) ಅಥವಾ ಅವರಿಂದ ನಾಮನಿರ್ದೇಶಿತ ವ್ಯಕ್ತಿಯ ನೇತೃತ್ವದಲ್ಲಿ ಹೆಚ್ಚುವರಿ ಕಾರ್ಯದರ್ಶಿಗಳು (ಶಾಲಾ ಶಿಕ್ಷಣ), ಜಂಟಿ ಕಾರ್ಯದರ್ಶಿಗಳು (ಕುಡಿಯುವ ನೀರು ಮತ್ತು ನೈರ್ಮಲ್ಯ ಮಂತ್ರಾಲಯ), ಜಂಟಿ ಕಾರ್ಯದರ್ಶಿಗಳು (ಶಾಲಾ ಶಿಕ್ಷಣ), ಶಾಲೆಗಳಲ್ಲಿನ ಮೂವರು ಪರಿಣಿತರು / ದ್ವಿಪಕ್ಷೀಯ ಸಂಸ್ಥೆಗಳು/ನಾಗರಿಕ ಸಮಾಜ ಸಂಸ್ಥೆಯ ಪ್ರತಿನಿಧಿಗಳನ್ನು (ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇವರಿಂದ ಆಯ್ಕೆಗೊಂಡಿರುವ) ಒಳಗೊಂಡ ಸಮಿತಿಯು ಅಂತಿಮ ವಿಜೇತರನ್ನು ತೀರ್ಮಾನಿಸುವುದು.

- ಅತ್ಯುತ್ತಮವಾದ ಗರಿಷ್ಠ ಅಂಕಗಳನ್ನು ಪಡೆದ 100 ಶಾಲೆಗಳನ್ನು (ಪ್ರಾಥಮಿಕ ಮತ್ತು ಪ್ರೌಢಶಾಲೆಗಳು) ಗುರುತಿಸಿ ಪ್ರಶಸ್ತಿಪತ್ರದೊಂದಿಗೆ ಬಹುಮಾನವಾಗಿ ರೂ.50,000.00ಗಳನ್ನು ಹೆಚ್ಚುವರಿ ಶಾಲಾ ಅನುದಾನವಾಗಿ ನೀಡಲಾಗುವುದು. ಈ ಅನುದಾನವನ್ನು ಶಾಲಾ ಅನುದಾನದ ಮಾರ್ಗಸೂಚಿಗಳನ್ವಯ ಶಾಲೆಯ ನೈರ್ಮಲ್ಯ ಹಾಗೂ ಶಾಲಾ ಶುಚಿತ್ವವನ್ನು ಸುಧಾರಿಸಲು ಬಳಸುವುದು.

- ಇದಲ್ಲದೆ, ಪ್ರಶಸ್ತಿಪತ್ರಗಳನ್ನು ಈ ಕೆಳಗಿನಂತೆ ವಿತರಿಸಲಾಗುವುದು:

(ಅ) ಒಟ್ಟಾರೆ ಹಸಿರು ಶ್ರೇಣಿಯನ್ನು ಪಡೆದ ಶೇಕಡಾವಾರು ಹೆಚ್ಚು ಪ್ರಮಾಣದ ಶಾಲೆಗಳನ್ನು ಹೊಂದಿರುವ ಜಿಲ್ಲೆಗೆ ಉತ್ತಮವಾಗಿ ಕಾರ್ಯನಿರ್ವಹಿಸುವ ಜಿಲ್ಲೆ ಎಂದು (ಒಟ್ಟು 10) ಪರಿಗಣಿಸಲಾಗುವುದು. ಜಿಲ್ಲೆಯು ಪ್ರತಿ ವರ್ಷ ಹೆಚ್ಚಿನ ಪ್ರಗತಿಯನ್ನು ಸಾಧಿಸಬೇಕಿದ್ದು, ಕಡಿಮೆ ಅಂಕಗಳನ್ನು ಪಡೆದ ಶಾಲೆಗಳು ಹೆಚ್ಚಿನ ಅಂಕಗಳನ್ನು ಪಡೆಯುವ ಪ್ರಯತ್ನ ಮಾಡುವುದು ಹಾಗೂ ಈಗಾಗಲೇ ಹಸಿರು ಶ್ರೇಣಿಯನ್ನು ಪಡೆದ ಶಾಲೆಗಳಲ್ಲಿ ಅದೇ ಸ್ಥಿತಿಯನ್ನು ಕಾಪಾಡಿಕೊಳ್ಳುವುದು.

- ರಾಷ್ಟ್ರ ಮಟ್ಟದ ಪ್ರಶಸ್ತಿ ಪ್ರದಾನಕ್ಕಾಗಿ ವ್ಯಯವಾಗುವ ವೆಚ್ಚವನ್ನು ಎಸ್.ಎಸ್.ಎ/ಆರ್.ಎಂ.ಎಸ್.ಎ ಕಾರ್ಯಕ್ರಮಗಳಿಂದ ಭರಿಸಲಾಗುವುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಅತಿ ಶೀಘ್ರದಲ್ಲಿಯೇ ಎಲ್ಲಾ ಸರ್ಕಾರಿ ಶಾಲೆಗಳಿಗೆ ತಲುಪಿಸಿ, ನೋಂದಣಿ ಮಾಡಿಕೊಳ್ಳಲು ಅಗತ್ಯ ನೆರವು ಮತ್ತು ಮಾರ್ಗದರ್ಶನ ನೀಡುವುದು. ಕಾರ್ಯಕ್ರಮದ ಕುರಿತು ವಿವಿಧ ಹಂತಗಳ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಿದ್ದು, ಇದರ ದಿನಾಂಕವನ್ನು ಶೀಘ್ರದಲ್ಲಿಯೇ ತಿಳಿಸಲಾಗುವುದು.

ಇದೊಂದು, ಅತ್ಯುತ್ತಮ ಕಾರ್ಯಕ್ರಮವಾಗಿದ್ದು, ಎಲ್ಲಾ ಶಾಲೆಗಳು ಭಾಗವಹಿಸಿ, ಗುರುತಿಸಿಕೊಂಡು ಪ್ರೋತ್ಸಾಹಕಗಳನ್ನು ಪಡೆಯುವಂತೆ ಪ್ರೇರೇಪಿಸುವುದು.

ರಾಜ್ಯ ಯೋಜನಾ ನಿರ್ದೇಶಕರು,
ಸರ್ವ ಶಿಕ್ಷಣ ಅಭಿಯಾನ,
ಬೆಂಗಳೂರು.

**ಪ್ರತಿಗಳು ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು (ಡಿವೈಪಿಸಿ), ಸರ್ವ ಶಿಕ್ಷಣ ಅಭಿಯಾನ.
2. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು /ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಆಯಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ರವರಿಂದ ಮಾಹಿತಿ ನೀಡತಕ್ಕದ್ದು.

**ಇವರಿಗೆ ಮಾಹಿತಿಗಾಗಿ:**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ರಸ್ತೆ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ.
4. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ನಂ.4 100 ಫೀಟ್ ರಿಂಗ್‌ರೋಡ್, ಬನಶಂಕರಿ 3ನೇ ಹಂತ, ಬೆಂಗಳೂರು-560085.
5. ನಿರ್ದೇಶಕರು, ಕೆ.ಎಸ್.ಇ.ಇ.ಬಿ, 6ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560003
6. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ, ಮೈಸೂರು; (ವಿಭಾಗೀಯ ಕಛೇರಿಗಳು)
7. ಮುಖ್ಯ ಲೆಕ್ಕಾಧಿಕಾರಿಗಳು, ಲೆಕ್ಕಶಾಖೆ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು
8. ಕಛೇರಿ ಪ್ರತಿ.

ಅನುಬಂಧ–2

ಸೂಚ್ಯಾಂಕಗಳ ಪಟ್ಟಿ :

| ಕ್ರಸಂ | ವರ್ಗಗಳು | ಸೂಚ್ಯಾಂಕಗಳು |
|---|---|---|
| 1 | ನೀರು | ಸುರಕ್ಷಿತ ಹಾಗೂ ಯೋಗ್ಯವಾದ ಕುಡಿಯುವ ನೀರಿನ ಲಭ್ಯತೆ. |
| | | ಶೌಚಾಲಯದ ಬಳಕೆಗೆ ನೀರಿನ ಲಭ್ಯತೆ. |
| 2 | ಶೌಚಾಲಯಗಳು | ಕಾರ್ಯನಿರ್ವಹಿಸುತ್ತಿರುವ ಹೆಣ್ಣು ಮತ್ತು ಗಂಡು ಮಕ್ಕಳಿಗಿರುವ ಪ್ರತ್ಯೇಕ ಶೌಚಾಲಯಗಳ ಲಭ್ಯತೆ. |
| | | ಕಾರ್ಯನಿರ್ವಹಿಸುತ್ತಿರುವ ಹೆಣ್ಣು ಮತ್ತು ಗಂಡು ಮಕ್ಕಳಿಗಿರುವ ಪ್ರತ್ಯೇಕ ಮೂತ್ರಾಲಯಗಳ ಲಭ್ಯತೆ. |
| | | ವಿಶೇಷ ಅಗತ್ಯಯುಳ್ಳ ಮಕ್ಕಳಿಗೆ, ಶಿಕ್ಷಕರಿಗೆ, ಸಿಬ್ಬಂದಿಗಳಿಗೆ ಕಾರ್ಯನಿರ್ವಹಿಸುತ್ತಿರುವ ಶೌಚಾಲಯದ ಲಭ್ಯತೆ. |
| 3 | ಸಾಬೂನು ಬಳಸಿ ಕೈ ತೊಳೆಯುವುದು. | ಕಾರ್ಯನಿರ್ವಹಿಸುತ್ತಿರುವ, ಶೌಚಾಲಯ ಬಳಸಿದ ನಂತರದ ಕೈತೊಳೆಯುವ ಘಟಕದ ಸೌಲಭ್ಯ. |
| | | ಕಾರ್ಯನಿರ್ವಹಿಸುತ್ತಿರುವ, ಊಟಕ್ಕೆ ಮುನ್ನ ಕೈತೊಳೆಯುವ ಘಟಕದ ಸೌಲಭ್ಯ. . |
| 4 | ಕಾರ್ಯಾಚರಣೆ ಮತ್ತು ನಿರ್ವಹಣೆ | ಘನ ಮತ್ತು ದ್ರವ ಕಸವನ್ನು ಸುರಕ್ಷಿತವಾಗಿ ವಿಲೇವಾರಿ ಮಾಡುವ ವ್ಯವಸ್ಥೆ. |
| | | ಶಾಲಾ ಪರಿಸರದ ಸ್ವಚ್ಛತೆ ಹಾಗೂ ನಿರ್ವಹಣೆ. |
| 5 | ವರ್ತನೆಯಲ್ಲಿ ಬದಲಾವಣೆ ಮತ್ತು ಸಾಮರ್ಥ್ಯ ಅಭಿವೃದ್ಧಿ | ಶಾಲೆಯಲ್ಲಿನ ನೈರ್ಮಲ್ಯ ಶಿಕ್ಷಣ. |
| | | ವಿದ್ಯಾರ್ಥಿಗಳು ಹಾಗೂ ಮಧ್ಯಾಹ್ನ ಬಿಸಿಯೂಟದ ಅಡುಗೆ ತಯಾರಕರ ಶುಚಿತ್ವದ ಅಭ್ಯಾಸಗಳು. |

ಅನುಬಂಧ-3

**ಮೌಲ್ಯಾಂಕನದ ವಿಧಾನ :**

| ಕ್ರ.ಸಂ | ಮೌಲ್ಯಾಂಕನ ಮಾಡುವ ಉಪವಿಭಾಗಗಳು | ಗರಿಷ್ಠ ಅಂಕ |
|---|---|---|
| 1 | ನೀರು (ಪ್ರಶ್ನೆ.ಸಂ 1 ರಿಂದ 8) | 22 |
| 2 | ಶೌಚಾಲಯ (ಪ್ರಶ್ನೆ.ಸಂ 9 ರಿಂದ 18) | 28 |
| 3 | ಸಾಬೂನು ಬಳಸಿ ಕೈ ತೊಳೆಯುವ ವ್ಯವಸ್ಥೆ (ಪ್ರಶ್ನೆ.ಸಂ 19 ರಿಂದ 24) | 20 |
| 4 | ಕಾರ್ಯಾಚರಣೆ ಮತ್ತು ನಿರ್ವಹಣೆ (ಪ್ರಶ್ನೆ.ಸಂ 25 ರಿಂದ 31) | 15 |
| 5 | ವರ್ತನೆಯಲ್ಲಿ ಬದಲಾವಣೆ ಮತ್ತು ಸಾಮರ್ಥ್ಯ ಅಭಿವೃದ್ಧಿ (ಪ್ರಶ್ನೆ.ಸಂ 32 ರಿಂದ 39) | 15 |
| | **ಒಟ್ಟು** | **100** |

**ಶಾಲೆಗಳ ವರ್ಗಗಳು :**

| ಕ್ರ.ಸಂ | ಶಾಲೆಗಳ ವರ್ಗಗಳು | ಗರಿಷ್ಠ ಅಂಕ |
|---|---|---|
| 1 | ಸಹಶಿಕ್ಷಣ, ಹಿರಿಯ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು, | 100 |
| 2 | ಸಹಶಿಕ್ಷಣ, ಪ್ರಾಥಮಿಕ ಶಾಲೆಗಳು (ಪ್ರಶ್ನೆ ಸಂಖ್ಯೆಗಳು – 17, 18, 37 ಅನ್ವಯಿಸುವುದಿಲ್ಲ) | 95 |
| 3 | ಎಲ್ಲಾ ಗಂಡುಮಕ್ಕಳ ಶಾಲೆಗಳು, ಪ್ರಾಥಮಿಕ ಶಾಲೆಗಳು (ಪ್ರಶ್ನೆ ಸಂಖ್ಯೆಗಳು – 9, 10ಬಿ, 11ಬಿ, 17, 18, 37 ಅನ್ವಯಿಸುವುದಿಲ್ಲ) | 86 |
| 4 | ಎಲ್ಲಾ ಹೆಣ್ಣುಮಕ್ಕಳ ಶಾಲೆಗಳು, ಪ್ರಾಥಮಿಕ ಶಾಲೆಗಳು (ಪ್ರಶ್ನೆ ಸಂಖ್ಯೆಗಳು – 9, 10ಎ, 11ಎ, 17, 18, 37 ಅನ್ವಯಿಸುವುದಿಲ್ಲ) | 86 |
| 5 | ಎಲ್ಲಾ ಹೆಣ್ಣುಮಕ್ಕಳು, ಹಿರಿಯ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು (ಪ್ರಶ್ನೆ ಸಂಖ್ಯೆಗಳು – 9, 10ಎ, 11ಎ ಅನ್ವಯಿಸುವುದಿಲ್ಲ) | 91 |